ISSN : 2583-2948

# ಅಮೋಘಸಿದ್ಧ ಜನಪದ ಮಹಾಕಾವ್ಯದಲ್ಲಿ ಬಹುತ್ವದ ನೆಲೆ



**ಡಾ.ಮದಗೊಂಡ ಬಿರಾದಾರ**
ಉಪನ್ಯಾಸಕರು, ಕನ್ನಡ ವಿಭಾಗ,
ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು-೫೭೫೦೦೧

ಒಂದು ಭಾಷೆ ಎಂದರೆ ಅದೊಂದು ಸಂಸ್ಕೃತಿಯೇ ಸರಿ. ಒಂದು ಭಾಷೆಯನ್ನಾಡುವ ಜನರ ಸಾಂಸ್ಕೃತಿಕ, ರಾಜಕೀಯ ಇತ್ಯಾದಿ ಅಂಶಗಳು ಭಾಷೆಯ ಒಳಗಡೆಗೆ ಅಡಕವಾಗಿರುತ್ತವೆ. ಜನ ಜೀವನದ ಆಗುಹೋಗುಗಳ ಕೇಂದ್ರ ಬಿಂದುವಾಗಿರುತ್ತದೆ. ಹಾಗಾಗಿ ಈ ಮಹಾಕಾವ್ಯದ ಮುಖ್ಯವಾದ ಶಬ್ದಗಳ ವಿಶೇಷತೆಯನ್ನು ವಿಷದ ಪಡಿಸುವ ಬದಲು ಅದರ ಒಟ್ಟು ಸಾಂಸ್ಕೃತಿಕ ಚಹರೆಯನ್ನು ದಾಖಲಿಸುವುದು ಮುಖ್ಯವೆನಿಸುತ್ತದೆ. ಇಲ್ಲಿ ಚಹರೆಯೇ ಏಕೆಂದರೆ ಒಂದು ಸಾಂಸ್ಕೃತಿಕ ಸ್ಥಿತಿಯನ್ನು ಗ್ರಹಿಸಿಕೊಳ್ಳುವ ಮನೋಲೋಕದ ಭೌಗೋಳಿಕ ಅಂತರ, ಪ್ರಾದೇಶಿಕ ಪ್ರಭಾವ, ಒತ್ತಡ ಇತ್ಯಾದಿ ಕಾರಣದಿಂದ ಅಪೂರ್ಣವೇ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ಅಮೋಘಸಿದ್ಧ ಜನಪದ ಮಹಾಕಾವ್ಯದ ಸಾಂಸ್ಕೃತಿಕ ಚಹರೆಯನ್ನು ಅರಿಯುವ ಸಣ್ಣ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಆಧುನಿಕ ಸಮಾಜ ಬಹುಮುಖಿ ಚಲನೆಯಿಂದ ಏಕಮುಖಿಯಾಗಿ ಸಾಗುತ್ತಿದೆ. ಇದು ಭಾಷಿಕವಾಗಿ ಮತ್ತು ಸಾಂಸ್ಕೃತಿಕವಾಗಿ ನೋಡಬಹುದು ನಿಜ. ಆದರೆ ವಿಪರ್ಯಾಸವೆಂದರೆ ಒಟ್ಟು ಸಾಮಾಜಿಕ ಚಲನೆಯು ಸಮುದಾಯ ಕೇಂದ್ರಿತವಾಗಿ ಬದಲಾಗುತ್ತಿರುವ ಲಕ್ಷಣವನ್ನು ಇವತ್ತಿನ ಸಂದರ್ಭದಲ್ಲಿ ಕಾಣಬಹುದು. ಒಟ್ಟು ವರ್ಗಗಳು ಇವತ್ತು ವಿಘಟನೆಗೆ ಒಳಗಾಗುತ್ತಿವೆ. ರಾಜಕೀಯ ಹಿತಾಸಕ್ತಿಯಿಂದ ಧಾರ್ಮಿಕ ಅಂಶಗಳನ್ನು

ಮುಂದಿಟ್ಟುಕೊAಡು ಪ್ರತ್ಯೇಕತೆಯ ಪತಾಕಿ ಹಾರಿಸುವ ಕೆಲಸ ಭರದಿಂದ ಸಾಗುತ್ತಿದೆ. ಈ ವಿಷಯದಲ್ಲಿ ಯಾವುದೊಂದು ಸಮುದಾಯ ಅಥವಾ ವರ್ಗದ ಕಡೆಗೆ ಬೊಟ್ಟು ಮಾಡಬೇಕಾಗಿಲ್ಲ. ಅಧಿಕಾರ ಮತ್ತು ಶ್ರೇಷ್ಠತೆಯ ವ್ಯಸನವೇ ಇದಕ್ಕೆಲ್ಲ ಕಾರಣವೆನ್ನಬಹುದು. ಏಕೆಂದರೆ ಅಮೋಘಸಿದ್ಧ ಪರಂಪರೆ ಎನ್ನುವುದು ಹಲವು ಭಾಷಿಕ, ಸಮುದಾಯಿಕ, ಪ್ರಾದೇಶಿಕ ವರ್ಗಗಳನ್ನು ಒಳಗೊಂಡಿರುವ ಬಹುತ್ವವನ್ನು ಪ್ರತಿನಿಧಿಸುವಂತಹ ಗುಣಧರ್ಮವಿದೆ. ಈ ಮಹಾಕಾವ್ಯದಲ್ಲಿ ಪುರೋಹಿತಶಾಹಿ, ಅಧಿಕಾರಶಾಹಿ(ಗೌಡಕಿ), ಪಶುಪಾಲನೆ ಈ ಮೂರು ಜೊತೆ ಜೊತೆಗೆ ಇರುವುದರಿಂದ ಅದು ಕೇವಲ ಒಂದು ವರ್ಗ ಅಥವಾ ಸಮುದಾಯದ ಪ್ರತಿನಿಧಿಯಾಗದೆ ಹಲವು ಸಮುದಾಯಗಳನ್ನು ಒಳಗೊಳ್ಳುವ ಸಾಂಸ್ಕೃತಿಕ ಚಹರೆಯಾಗಿದೆ. ಉದಾಹರಣೆಗೆ, ಅಮೋಘಸಿದ್ಧನ ಕೈಲಾಸ ಯಾತ್ರೆಯಿಂದ ಭೂಲೋಕದವರೆಗೆ ಹಾಗೂ ಅಮೋಘಸಿದ್ಧನ ಆರಂಭದಿAದ ಕೊನೆಯವರೆಗಿನ ಮಹಿಮಾತ್ಮಕ ಘಟನೆಗಳ ಜೊತೆಗೆ ಬಯಲ ಭೂತಾಳಸಿದ್ಧ ಕಾಣಿಸಿಕೊಳ್ಳುತ್ತಾನೆ. ಈ ಬಯಲ ಭೂತಾಳಸಿದ್ಧ ಯಾವ ಸಮುದಾಯದ ಪ್ರತಿನಿಧಿಯಾಗಿ ಕಾಣುವನು? ಹಾಗೆ ನೋಡಿದರೆ ಭೂತಾಳಸಿದ್ಧ ಅಮೋಘಸಿದ್ಧನ ನಂತರದ ಸಿದ್ಧಪರಂಪರೆಯ ಭಾಗವಾಗಿಯೇ ಬರುತ್ತಾನೆ. ಅಂದರೆ ಅಮೋಘಸಿದ್ಧನ ಮಕ್ಕಳಿಂದ ಮರಿಮೊಮ್ಮಕ್ಕಳವರೆಗೆ ಈ ಪರಂಪರೆಯ ಭಾಗವಾಗಿ ಕಾಣಿಸಿಕೊಳ್ಳುತ್ತಾನೆ. ಅಂದರೆ ಯಾವ ಸಿದ್ಧರAನ್ನು ಹೆಸರಿಸಿದರೂ ಅವರ ಜೊತೆಗೆ ಭೂತಾಳಸಿದ್ಧ ಕಾಣಿಸಿಕೊಳ್ಳುತ್ತಾನೆ. ಹಾಗೆಯೇ ಕರಣಿ ಮಲಕಾರಿಸಿದ್ಧ, ತೇರುವಾಡ ಮಂಗರಾಯ, ಭಂಡಾರಕವಟೆಯ ಮಹಾಸಿದ್ಧ(ಮಾಸಿದ್ಧ) ಸೋಲಾಪುರ ಸಿದ್ಧರಾಮ, ಹುಲಜಂತಿ ಮಾಳಿಂಗರಾಯ, ಕುಂಬಾರ ರಾಮಯ್ಯ, ಲಚ್ಯಾಣ ಸಿದ್ಧಲಿಂಗ ಮುಂತಾದವರು ಅಮೋಘಸಿದ್ಧನ ಕಾಲ ಮತ್ತು ನಂತರದ ಕಾಲದಲ್ಲಿ ಕಾಣಿಸಿಕೊಳ್ಳುತ್ತಾರೆ. ಹಾಗೆಯೇ ನೋಡಿದರೆ ಇವರೆಲ್ಲ ಬೇರೆ ಬೇರೆ ಸಮುದಾಯದವರು. ಆ ಕಾರಣದಿಂದಲೇ ಅಮೋಘಸಿದ್ಧ ಪರಂಪರೆಯು ಬಹುತ್ವವನ್ನು ಪ್ರತಿನಿಧಿಸುವಂತದ್ದು. ಇದು ಕೇವಲ ಸಮುದಾಯಿಕ ಹಿನ್ನೆಲೆಯಾದರೆ, ತಾತ್ವಿಕಧಾರೆಗಳ ಹಿನ್ನೆಲೆಗೊಂದು ಬಯಲು ಮಂಟಪವೇ ಇದೆ. ಅಲ್ಲಿ ಶರಣರು, ಸೂಫಿಗಳು ಬೇರೆ ಬೇರೆ ಧಾರ್ಮಿಕ ನಿಷ್ಠರೊಂದಿಗೆ ನಡೆದ ವಾಗ್ವಾದ, ಸಂವಾದಗಳು ಸಾಕಷ್ಟಿವೆ. ಬಿಳೇಣಿಸಿದ್ಧನು ಕುಂಬಾರ ರಾಮಯ್ಯನ ಮಗನಿಗೆ ಲಿಂಗ ಧಾರಣೆ ಮಾಡಲು ಹೋದಾಗ, ಜಂಗಮರ ನಡುವೆ ನಡೆದ ತಾತ್ವಿಕ ವಾಗ್ವಾದ, ವಿರಸ, ಮೇಲು-ಕೇಳು ಮನೋಭಾವದ ಅವಕಾಶವಾದಿತನವನ್ನು ಮೆಟ್ಟಿನಿಂತು, ಸತ್ಯದ ದರ್ಶನ ಮಾಡಿದ ಬಗೆಯನ್ನು ನೋಡಬಹುದು. ಶರಣರೆಲ್ಲರೂ ಅಮೋಘಸಿದ್ಧನಿಗೆ ಲಿಂಗಧಾರಣೆ ಮಾಡಲು ಬಂದಾಗA ಅವನ ಮೈಮೇಲೆ ಲಕ್ಷಾಂತರ ಲಿಂಗಗಳಿರುವುದನ್ನು ಕಂಡು ಶರಣರೆಲ್ಲರು ಹುಟ್ಟು ಲಿಂಗಿಯಾದ ಅಮೋಘಸಿದ್ಧನಿಗೆ ಶರಣಾಗಿದ ಬಗೆ ಮತ್ತು ಅವನನ್ನು ಅಲ್ಲಮನೆಂದು ಪರಿಭಾವಿಸುವ ಕ್ರಮ ವಿಶಿಷ್ಟವಾಗಿಯೇ ಇದೆ. ಹಾಗೆಯೇ ಅವತಾರ ಔದುಸಿದ್ಧ, ದೇವೇಂದ್ರ ಬಿಳೇಣಿಸಿದ್ಧ ಈ ಇಬ್ಬರು ಸೂಫಿ ಸಂತರೊAದಿಗೆ ನಡೆಸಿದ ತಾತ್ವಿಕ ಚರ್ಚೆಗಳು, ಇಸ್ಲಾಂ ಪ್ರಭುತ್ವ ಒಡ್ಡಿದ ಸವಾಲುಗಳನ್ನು ಎದುರಿಸಿದ ಬಗೆಯನ್ನು ಗಮನಿಸಿದರೆ ಸುಮಾರು ಹತ್ತು, ಹನ್ನೊಂದನೇ ಶತಮಾನದಿಂದ ಈ ಪರಂಪರೆA ಹಲವು

ಪರಂಪರೆಗಳೊAದಿಗೆ ಸೆಣಸಾಡಿ ಇವತ್ತಿಗೂ ಜನಮಾನಸದಲ್ಲಿರುವುದನ್ನು ಗಮನಿಸಿದರೆ ಪವಾಡವೆಂದೇನಿಸುತ್ತದೆ.

ಭಾರತದ ನೆಲ ಮೂಲದ ತಾತ್ವಿಕ ಧಾರೆಗಳು ಹಲವಾರು. ಉದಾಹರಣೆಗೆ: ಶಾಕ್ತ, ಶೈವ, ವೈಷ್ಣವ, ಜೈನ, ಬೌದ್ಧ, ನಾಥ ಆರೋಡ, ಮಹಾನುಭಾವ, ವಾರ್ಕರಿ, ವಚನಧಾರೆ, ಸೂಪಿ, ಔಧೂತ ಇತ್ಯಾದಿ. ಅದಲ್ಲದೇ ಅಸಂಖ್ಯಾತ ಜನಪದ ತಾತ್ವಿಕಧಾರೆಯನ್ನು ಗುರುತಿಸಬಹುದು. ಪ್ರದೇಶ, ಭಾಷೆಗಳ ಹಿನ್ನೆಲೆಯಲ್ಲಿಯೂ ನೋಡಬಹುದು. ಅಮೋಘಸಿದ್ಧ ಶೈವ ಭಕ್ತ ಮತ್ತು ಆರಾಧಕ. ಹಾಗೆಯೇ ಸಿದ್ಧ ಪರಂಪರೆಯನ್ನು ಕರ್ನಾಟಕ ಹಾಗೂ ಮಹಾರಾಷ್ಟ್ರದ ಗಡಿಭಾಗದಲ್ಲಿ ಬೆಳೆಯುವಲ್ಲಿ ಪ್ರಮುಖ ಪಾತ್ರವಹಿಸಿದ್ದವನು. ಈ ತಾತ್ವಿಕಧಾರೆಯ ಅಮೋಘಸಿದ್ಧ ಮುಖ್ಯವಾಗಿ ಜನಪದರ ತಾತ್ವಿಕತೆಯ ಭಾಗವಾಗಿದ್ದವನು. ಜನಸಾಮಾನ್ಯರ ಬದುಕಿನ ಭವಣೆಯೊಂದಿಗೆ ಬದುಕಿದವನು. ಜನರ ನೋವಿಗೆ ಮತ್ತು ಸಮಸ್ಯೆಗೆ ಆಶ್ರಯವಾಗಿದ್ದವನು.

ಜನಪದ ಮಹಾಕಾವ್ಯವೆಂದರೆ ಅದು ಅತಿಮಾನುಷ ಅಂಶಗಳ ಗುಚ್ಚ. ಅದನ್ನು ಮಾಯಾವಾಸ್ತವವಾದ, ಮಾಂತ್ರಿಕವಾದವೆAದು ಕರೆಯುತ್ತೇವೆ. ಅಮೋಘಸಿದ್ಧ ಮಹಾಕಾವ್ಯದಲ್ಲಿಯೂ ಜುಂಜಪ್ಪ, ಮಲೆಮಾದೇಶ್ವರ, ಮಂಟೆಸ್ವಾಮಿ, ಹಾಲುಮತ ಮಹಾಕಾವ್ಯಗಳಲ್ಲಿ ಇರುವಂತೆ ಅತಿ ಮಾನುಷ ಘಟನೆಗಳು ಇರುವುದನ್ನು ಕಾಣುತ್ತೇವೆ. ಜನಪದ ಮಹಾಕಾವ್ಯವೆಂದರೆ ಅದು ಆದಿಮ ಕಾವ್ಯ ಅಥವಾ ಆದಿಮ ಸಂಸ್ಕೃತಿಯೇ ಸರಿ. ಹಾಗಾಗಿ ಇಲ್ಲಿಯ ಕಥಾನಾಯಕನ ಮೂಲ, ಕಾಲ ಗುರುತಿಸುವುದು ಕೂಡ ಸರಿಯಾದ ಕ್ರಮ ಆಗಿರಲಾರದು. ಏಕೆಂದರೆ, ಜನಪದ ಮಹಾಕಾವ್ಯದಲ್ಲಿ ಹಾಡುಗಾರನ ತಿಳುವಳಿಕೆಯ ಹಿನ್ನೆಲೆಯಲ್ಲಿ ಕಾಲಕಾಲಕ್ಕೆ ಸಾಕಷ್ಟು ಸಂಭವ-ಅಸAಭವದÀ ವಿಷಯಗಳು ಸೇರಿರುತ್ತವೆ. ಅದು ಸರಿ ತಪ್ಪು ಅವರಿಗೆ ಮುಖ್ಯವಾಗಿರುವುದಿಲ್ಲ. ಕಥಾನಾಯಕನ ಪ್ರಾಮುಖ್ಯತೆಯನ್ನು ವೈಭವೀಕರಿಸುವುದೇ ಮುಖ್ಯವಾಗಿರುತ್ತದೆ. ಹಾಗಾಗಿ ಸಾಕಷ್ಟು ವಿಷಯಗಳು ಕಾಲಾನುಕ್ರಮದ ಅನುಶ್ರೇಣಿಯಲ್ಲಿ ಪಲ್ಲಟಗೊಂಡಿರುತ್ತವೆ. ಉದಾಹರಣೆಗೆ: ಅಮೋಘಸಿದ್ಧ ಮಹಾಕಾವ್ಯವನ್ನು ಹಾಡಿದವರು ಹತ್ತೂರಿನ ಔದು ಬನಸಿದ್ಧ ಹಿರಕೂರು. ಇದು ದಕ್ಷಿಣ ಸೋಲ್ಲಾಪೂರದಲ್ಲಿ ಬರುತ್ತದೆ. ಇದು ಕರ್ನಾಟಕದ ಗಡಿಯಲ್ಲಿರುವ ಮಹಾರಾಷ್ಟ್ರದ ಒಂದು ತಾಲೂಕಾಗಿದ್ದು, ಕಲಬುರಗಿ ಮತ್ತು ವಿಜಯಪುರದೊಂದಿಗೆ ಗಡಿ ಹಂಚಿಕೊAಡಿದೆ. ಅಲ್ಲಿಯ ಮಾತೃ ಭಾಷೆ ಕನ್ನಡವಾಗಿದ್ದರೂ ಮರಾಠಿ ಮತ್ತು ಹಿಂದಿಯ ದಟ್ಟ ಪ್ರಭಾವ ಇರುವ ಸ್ಥಳವಾಗಿದೆ. ಸಹಜವಾಗಿ ಭಾಷೆಯ ಕಾರಣಕ್ಕೆ ಒಂದಿಷ್ಟು ಮರಾಠಿ ಪದಗಳು ಸೇರಿಕೊಂಡಿವೆ. ಹಾಗೆಯೇ ಹಾಡಿನ ಮಧ್ಯ ಡೊಳ್ಳಿನ ಪದ, ತತ್ವಪದ, ಸೂಫಿ, ಶರಣರ ಆಚರಣೆ, ತತ್ವ ಚಿಂತನೆಗಳು ಬರುತ್ತವೆ. ಇಲ್ಲಿ ಮುಖ್ಯವಾಗಿ ಕಥಾ ನಾಯಕನಾದ ಅಮೋಘಸಿದ್ಧನೇ ಒಟ್ಟು ಕಥೆಯ ಕೇಂದ್ರಬಿAದುವಾಗಿರಬೇಕು. ಹೆಚ್ಚಿನಂಶ ಹಾಗಾಗಿಲ್ಲ. ಕಾರಣ ಹಾಡಿದವರು ಹತ್ತೂರಿನವರು. ಈ ಹತ್ತೂರು ಒಗ್ಯಾಣ ಮುತ್ಯಾ(ಓಗಸಿದ್ಧ) ಅಥವಾ ಬನಸಿದ್ಧನ ವಾಸಸ್ಥಾನ. ಹಾಡುಗಾರರು ಹತ್ತೂರದವರು ಮತ್ತು ಒಗ್ಯಾಣ ಮುತ್ಯಾನ ಭಕ್ತರು. ಅಮೋಘಸಿದ್ಧನ ನಾಲ್ಕು ಜನ ಪುಣ್ಯದ ಮಕ್ಕಳಾದ

ನಾಲ್ಕು ಜನ ಧರ್ಮರಿಗೆ ೨೧ ಧರ್ಮರು ಹುಟ್ಟುತ್ತಾರೆ. ಈ ೨೧ ಧರ್ಮರಲ್ಲಿ ಒಗ್ಯಾಣ ಮುತ್ಯಾ ಒಬ್ಬರು. ಹಾಗಾಗಿ ಹಾಡುಗಾರನಾದ ಔದು ಹಿರಕೂರ ಅವರು ಕೈಲಾಸದಿಂದ ಅಮೋಘಸಿದ್ಧ ಮತ್ತು ಶಿವ-ಪಾರ್ವತಿಯರಿಂದ ಕಥೆ ಆರಂಭಮಾಡಿ; ಭೂಲೋಕದ ಸೋಮಲಿಂಗ, ಅಮೋಘಸಿದ್ಧ, ಪದಮವ್ವರ ಕಥೆಯು ವೇಗ ಪಡೆದುಕೊಂಡು, ಒಗ್ಯಾಣ ಮುತ್ಯಾನ ಕಥೆಯಿಂದ ಅಂತ್ಯವಾಗುತ್ತದೆ. ಇದು ಈ ಕಾವ್ಯ ವಸ್ತುವಿನ ಹಿನ್ನೆಲೆಯಲ್ಲಿ ಅಂತ್ಯವಲ್ಲ. ಅಮೋಘಸಿದ್ಧನ ಮಹಿಮೆ ವಿಫುಲಾತಿ ವಿಫುಲ. ಹಾಗೆಯೇ ನಾಲ್ಕು ಧರ್ಮರ ಸಿದ್ಧಾಟಿಕೆಯ ಮಹಿಮೆಯು ಅಷ್ಟೇ. ಅಮೋಘಸಿದ್ಧನಿಂದ ಆರಂಭವಾಗಿ ಸಾವಿರದೊಂದು ಸಿದ್ಧರವರೆಗೆ ಈ ಕಥೆ ಹರವು ಇದೆ. ಹಾಗಾದರೆ ಸಾವಿರದೊಂದು ಸಿದ್ಧರ ಸಿದ್ದಾಟಿಕೆ ಎಲ್ಲಿ? ಇಲ್ಲಿಯ ಮುಖ್ಯ ವಿಷಯವೆನೆಂದರೆ ಈ ಮಹಾಕಾವ್ಯವಷ್ಟೇ ಅಮೋಘಸಿದ್ಧನ ಕಥೆ ಅಲ್ಲ ಎನ್ನುವುದು. ಇದರ ಹರವು ಸಾಕಷ್ಟು ವಿಸ್ತರಿಸಿಕೊಂಡಿದೆ. ಈ ವಿಷಯ ಸಂಪಾದಕರು ಪ್ರಸ್ತಾವಿಕ ಮಾತಿನಲ್ಲಿ ಹೇಳಿಕೊಂಡಿದ್ದಾರೆ. ಇನ್ನೊಂದು ಕುತೂಹಲದ ವಿಷಯವೆನೆಂದರೆ, ಅಮೋಘಸಿದ್ಧನ ಜನ್ಮಾಂತರದ ಮಹಿಮೆಗಳು. ಏಳು ಜನ್ಮದಲ್ಲಿ ಹುಟ್ಟಿದ್ದ ಎನ್ನುವ ಪ್ರತೀತಿ ಇದೆ. ಆ ಕುರಿತು ಸಾಕಷ್ಟು ಕಥೆಗಳು ಇವೆ. ಉದಾಹರಣೆಗೆ, ಇಡಿ ಪ್ರಪಂಚ ನೀರಿನಿಂದ ಆವೃತವಾಗಿತ್ತು. ಆ ನೀರ್ ನೀರಂಕಾರದೊಳಗೆ ಮೊದಲಿಗೆ ಓಂಕಾರನಾದ ಹೊರಡಿಸಿದವನು ಅಮೋಘಸಿದ್ಧ. ಒಂದೊAದು ಜನ್ಮದಲ್ಲಿ ಒಂದೊAದು ಹೆಸರುಗಳಿವೆ. ಅಂಬಋಷಿ, ದೈವಋಷಿ, ರೊಮಋಷಿ, ಗಣಋಷಿ, ಅಂಕೇಶ್ವರಋಷಿ, ಏಳನೆಯ ಅವತಾರ ಅಮೋಘಸಿದ್ಧ. ಅಮೋಘಸಿದ್ಧನ ಅನೇಕ ಪವಾಡದ ಕಥೆಗಳು ಜನಸಾಮಾನ್ಯರ ಬಾಯಲ್ಲಿವೆ. ಆರು ಜನ್ಮದ ಕಥೆಯ ಸ್ವರೂಪ ಒಂದು ಬಗೆಯದಾದರೆ, ಕೊನೆಯ ಜನ್ಮವಾದ 'ಅಮೋಘಸಿದ್ಧ'ನ ಕಥೆಯೇ ಬೇರೆಯಾಗಿದೆ. ಕೈಲಾಸದ ಕಥೆ, ಅಲ್ಲಿಂದ ಭೂಲೋಕಕ್ಕೆ ಬರುವ ಕಥೆ ಇನ್ನೊಂದು ಬಗೆಯದು. ತನ್ನ ಗುರು-ತಂದೆಯಾದ ಶಿವ ಭೂಲೋಕಕ್ಕೆ ಬಂದಾಗ ಸೋಮಲಿಂಗನಾಗಿ ಬದಲಾಗುತ್ತಾನೆ. ಶಿವ ಮಾಯ ಮಖಣಾಪೂರದಲ್ಲಿ ಮಾಯವಾಗಿ ಸೋಮಲಿಂಗನಾಗುವನು. ಅಮೋಘಸಿದ್ಧ ಮುಮ್ಮೆಟ್ಟ ಗುಡ್ಡದಲ್ಲಿ ನೆಲೆಯಾಗಿ ಅಲ್ಲಿಂದ ಮಖಣಾಪೂರಕ್ಕೆ ಗುರು ಸೇವೆಗೆ ಬರುವುದು, ಭಕ್ತರ ಆಶೋತ್ತರ ಇಡೇರಿಸುವ ಸತ್ಪುರಷನಾದಂತೆ ಅನ್ಯಾಯ-ಅಧರ್ಮವನ್ನು ಹೋಗಲಾಡಿಸುವನು. ಮಳೆಕೀಲ, ಬೆಳೆಕೀಲ, ಮಕ್ಕಳ ಭಾಗ್ಯ ಮುಂತಾದ ವರ ಪಡೆದಿರುವ ಅಮೋಘಸಿದ್ಧ ಜನಸಾಮಾನ್ಯರ ಬದುಕು ಹಸನಾಗುವಲ್ಲಿ ಪ್ರಮುಖ ಪಾತ್ರವಹಿಸಿದ್ದವನು. ಹಾಗೆಯೇ ಅಧಿಕಾರ-ದರ್ಪದ ವ್ಯವಸ್ಥೆಯನ್ನು ಇಲ್ಲವಾಗಿಸುವ ಕೆಲಸವನ್ನು ಮಾಡುವನು. ಈ ಜನಪದ ಮಹಾಕಾವ್ಯವು ಹಲವು ಸಿದ್ಧಾಟಿಕೆ(ಪವಾಡ)ಗಳ ಕಣಜವಾಗಿದೆ.

ಬಹುತೇಕ ಜನಪದ ಮಹಾಕಾವ್ಯಗಳ ರಾಚನಿಕ ವಿನ್ಯಾಸ ಒಂದೇ ಬಗೆಯದ್ದಾಗಿದ್ದರೂ ಅದರ ಭಾಷಿಕ ವಿನ್ಯಾಸ ಮಾತ್ರ ಭಿನ್ನವಾಗಿರುತ್ತದೆ. ಕಾರಣ ಪ್ರಾದೇಶಿಕತೆಯೇ ಅದರ ಮೂಲ ಕೇಂದ್ರವಾಗಿರುತ್ತದೆ. ಸೃಷ್ಟಿಕ್ರಿಯೆಯಲ್ಲಿ ಏರುಪೇರಾದಾಗ ಅದನ್ನು ಸರಿಪಡಿಸುವ ಮಹಾತ್ಮನಂತೆ ಇಲ್ಲಿಯ ನಾಯಕ ಕಾಣುತ್ತಾನೆ.

ಈ ಕಥಾನಾಯಕ ಮುಖ್ಯವಾಗಿ ಮನುಷ್ಯ ಜೀವನ ಕ್ರಮದ ಸುಖ-ದುಃಖ, ಸಮೃದ್ಧತೆ, ವಿಘಟನಾ ಶಕ್ತಿಗಳಿಗೆ ತಿಳಿ ಹೇಳುವ ಅರಿವಿನ ಪ್ರಜ್ಞೆ ಮೂಡಿಸುವಂತೆ ಕಾಣುತ್ತಾನೆ. ಮಂಟೆಸ್ವಾಮಿ ಕಾವ್ಯದಲ್ಲಿ ಮಂಟೆಸ್ವಾಮಿಯು ಬಸವಣ್ಣನ ಜೊತೆ ಸಂವಾದಕ್ಕೆ ಇಳಿದಂತೆ, ಈ ಮಹಾಕಾವ್ಯದಲ್ಲಿ ಶರಣರು ಅಮೋಘಸಿದ್ಧನ ಜೊತೆಗೆ ಸಂವಾದಕ್ಕೆ ಮುಂದಾಗುತ್ತಾರೆ. ಅಂದರೆ ಅದು ತಾತ್ವಿಕ ನೆಲೆಯ ಚರ್ಚೆಯಾಗಿದೆ. ಈ ಮಹಾಕಾವ್ಯದಲ್ಲಿ ಅಮೋಘಸಿದ್ದ ಹಾಗೂ ಶರಣರ ಜೊತೆಗಿನ ಸಂವಾದದ ಸ್ವರೂಪವನ್ನು ಅವನ ಮಕ್ಕಳಾದ ಅವತಾರ ಔದುಸಿದ್ಧ ಮತ್ತು ದೇವೇಂದ್ರ ಬಿಳೇಣಿಸಿದ್ಧ ಈ ಇಬ್ಬರೂ ಇಸ್ಲಾಂ ಧರ್ಮ ಮತ್ತು ಪ್ರಭುತ್ವ, ಸೂಫಿ, ವೀರಶೈವ ಜಂಗಮರೊAದಿಗಿನ ಮುಖಾಮುಖಿ ನೆಲಮೂಲದ ತಾತ್ವಿಕತೆಯನ್ನು ದರ್ಶಿಸುವಂತೆ ಕಾಣುತ್ತಾರೆ. ಈ ತರಹದ ಕೆಲವು ವಿಷಯ ಈ ಮಹಾಕಾವ್ಯದಲ್ಲಿ ಪ್ರಸ್ತಾಪವಾಗಿಲ್ಲ. ಆದರೆ ಜನರ ಮಧ್ಯೆ ಈ ತರಹದ ಹಲವು ಕಥೆಗಳು ಇವತ್ತಿಗೂ ಹರಿದಾಡುತ್ತಿವೆ.

ಧರ್ಮದ ಕಟ್ಟೆ ಇದು ಅಮೋಘಸಿದ್ಧನ ನಾಲ್ಕು ಜನ ವರವಿನ ಮಕ್ಕಳು ನ್ಯಾಯಪಂಚಾಯಿತಿ ಮಾಡುವ ಕಟ್ಟೆಯಾಗಿದೆ. ಇದು ಮಹಾಭಾರತದ ಕಥೆಯನ್ನು ನೆನಪಿಸುತ್ತದೆ. ಹಾಗೆಯೇ ಔದುಸಿದ್ಧ ಮತ್ತು ಬಿಳೇಣಿಸಿದ್ಧ ಹರಣದ ಕೆರೆಯಲ್ಲಿ ಮೊಳಗಿ ಹೋಗಿದ್ದ ಪಾಂಡವರ ರಥವನ್ನು ಕೆರೆಯಿಂದ ಹೊರಗೆ ತೆಗೆಯುವರು. ಅಮೋಘಸಿದ್ಧ ಮಹಾಭಾರತದ ಕುರುಕ್ಷೇತ್ರ ಯುದ್ಧದ ನಂತರ ಅಲ್ಲಿ ದುಃಖಿಸುತ ಕುಳಿತ ಕುಂತಿಗೆ ಸಮಾಧಾನ ಹೇಳಿ ಮುಂದಿನ ಜನ್ಮದಲ್ಲಿ ನನ್ನ ಸೊಸೆಯಾಗಿ ಹುಟ್ಟಿ ಬಾ ಎಂದು ಭಂಡಾರ ಕೊಟ್ಟು ಬರುವನು. ಆ ಕುಂತಿಯೇ ಬಿಳೇಣಿಸಿದ್ಧನ ಹೆಂಡತಿ ಎನ್ನುವ ಪ್ರತೀತಿ. ಬಹುತೇಕ ನೆಲಮೂಲದ ಕಥೆಗೆ ರಾಮಾಯಣ ಮತ್ತು ಮಹಾಭಾರತದ ಸಂಬAಧ ಇದ್ದೇ ಇರುತ್ತದೆ. ಅಥವಾ ಕಲ್ಪಿಸಲಾಗಿರುತ್ತದೆ. ಈ ತರಹದ ಹಲವು ಅಂಶಗಳು ಅಮೋಘಸಿದ್ಧನ ಕಥೆಯಲ್ಲಿವೆ. ಇವತ್ತಿಗೂ ಈ ಧರ್ಮದ ಕಟ್ಟೆ ಇರುವುದು ವಿಶೇಷ. ಸೀತಾಳಭಾವಿ, ಸೀತಾಳ ನೀರು, ಸೀತಾಳ ಬಿಂದಿಗೆ, ನೇಮದ ಬೆತ್ತ, ಹೋಮದ ಕಂಬಳಿ, ಭಂಡಾರ ಭರಣಿ, ಮಳೆಕೀಲ, ಬೆಳೆಕೀಲ, ತೊಟ್ಟಿಲು ಭಾಗ್ಯ ಮುಂತಾದ ಶಬ್ದಗಳು ಒಬ್ಬ ಸತ್ಪುರುಷನ ಧಾರ್ಮಿಕ ಆಚರಣೆಯ ಶಾಬ್ದಿಕ ಗುಚ್ಛವಾಗಿ ಕಾಣುತ್ತವೆ. ಅದರ ಒಡಲೊಳಗೆ ಭೂಲೋಕದ ಹಲವು ಕಥೆಗಳು ತುಂಬಿಕೊAಡಿರುವುದನ್ನು ಕಾಣಬಹುದು. ಈ ತರಹದ ಬಹುತೇಕ ಶಬ್ದಗಳಿಗೆ ಈ ಮಹಾಕಾವ್ಯದ ಕೊನೆಗೆ ಅನುಬಂಧದಲ್ಲಿ ಸಂಪಾದಕರು ವಿವರಣೆ ಕೊಟ್ಟಿದ್ದಾರೆ.

ಈ ಹಿಂದೆ ಪ್ರಸ್ತಾಪಿಸಿದಂತೆ ಅಮೋಘಸಿದ್ಧ ಅವನ ಮಕ್ಕಳು ಹಾಗೂ ಆ ನಂತರದ ತಲೆಮಾರಿನವರು ಮುಖ್ಯವಾಗಿ ಪೌರೋಹಿತ್ಯ, ನಾಡಗೌಡಿಕೆ, ಪಶುಪಾಲನೆ ಈ ಮೂರು ವೃತ್ತಿಯನ್ನು ಮುಂದುವರಿಸಿಕೊAಡು ಬಂದವರು. ಆಚಾರಿ ಸೋಮಣ್ಣ ಮುತ್ಯಾ ಪೌರೋಹಿತ್ಯದ ಪ್ರತಿನಿಧಿಯಾದರೆ, ಅವತಾರಿ ಔದುಸಿದ್ಧ ಮತ್ತು ದೇವೇಂದ್ರ ಬಿಳೇಣಿಸಿದ್ಧ ನಾಡಗೌಡಿಕೆಯ ಪ್ರತಿನಿಧಿಯಾಗಿ ಕಾಣುತ್ತಾರೆ. ಇನ್ನೂಳಿದವರು ಸಿದ್ಧಾಟಿಕೆಯ ಮಹಾಪುರುಷರಾಗಿ ಪಶುಪಾಲನೆಯನ್ನು ಮುಂದುವರೆಸಿಕೊAಡು ಹೋಗುತ್ತಾರೆ. ಹಿರಿಯವನಾದ

 ISSN : 2583-2948

ಔದುಸಿದ್ಧನ ಮತ್ತು ಅವನ ತಮ್ಮ ಬಿಳೇಣಿಸಿದ್ಧ ಈ ಇಬ್ಬರ ನಡುವೆ ನಾಡಗೌಡಕೆಯ ಸ್ಪರ್ಧೆ ಏರ್ಪಟ್ಟು ಅಂತಿಮವಾಗಿ ಬಿಳೇಣಿಸಿದ್ಧ ಇದರಲ್ಲಿ ಯಶಸ್ವಿಯಾಗುವನು. ಈ ಘಟನೆಯಿಂದ ನೊಂದು 'ಶಿವಮನಿ' ಬಿಟ್ಟು ಹೋಗುವನು. ಅವನನ್ನು ಹುಡುಕಿಕೊಂಡು ಬಿಳೇಣಿಸಿದ್ಧ ಹೋಗುವನು. ಯಾರಿಗೂ ಕಾಣದಂತೆ ಅಣ್ಣ ಹುಲಿಯ ಹೊಟ್ಟೆಯಲ್ಲಿ ಅಡಗಿ ಕೊಳ್ಳುವನು. ಈ ಸತ್ಯವನ್ನು ಅಲ್ಲಿಯ ಜನರು ತಮ್ಮನಿಗೆ ತಿಳಿಸಿದಾಗ ಅವನು ಹುಲಿಯ ಬಾಯಿ ತೆರೆಯಲು ಹೇಳುವನು. ಅದು ಬಾಯಿ ತೆರೆಯದೆ ಇರುವುದರಿಂದ ಬಂದುಕಿನಿAದ ಗುಂಡು ಹಾರಿಸುವನು. ಅಣ್ಣನಾದ ಔದುಸಿದ್ಧ ಹುಲಿ ಹೊಟ್ಟೆಯಿಂದ ಜಿಗಿದು ಹೊರಗೆ ಬರುವನು. ಈ ವಿಷಯ ತಮ್ಮನಿಗೆ ತಿಳಿಸಿರುವ ಜನರಿಗೆ ಸಿಟ್ಟಿನಿಂದ ಕಲ್ಲಾಗಿ ಬಿಳ್ಳಲಿ ಎಂದು ಶಾಪ ಕೊಡುವನು. ನಂತರ ಅಣ್ಣನೆದುರು ತಮ್ಮ ಕಾರಹುಣ್ಣಿಮೆಯ ದಿನ ಕರಿ ಹರಿದು ಸಿಂಹಾಸನವನ್ನು ಏರುವ ಸಂದರ್ಭ ಬಂದಾಗ ಬಿಳೇಣಿಸಿದ್ಧನ ಮಡದಿ ಕೊಂತ್ತೇವ್ವ ಅದನ್ನು ವಿರೋಧಿಸುವಳು. ಆಗ ಗಂಡ-ಹೆAಡರ ಮಧ್ಯ ಜಗಳವಾಗಿ ಕೊತ್ತೇವ್ವ ತೌವರ ಮನೆಗೆ ಹೋಗುವಳು. ಇಂತಹ ಹಲವು ಸಂಘರ್ಷಗಳು ಪುಣ್ಯದ ಮಕ್ಕಳು ಹಾಗೂ ವರವಿನ ಮಕ್ಕಳ ನಡುವೆ ನಡೆದಿರುವುದನ್ನು ಕಾಣಬಹುದು. ಉದಾಹರಣೆಗೆ: ಮಾಸಿದ್ಧನಿಗೆ ತಂದೆ ಅಮೋಘಸಿದ್ಧ ಬೆನ್ನಭುಜ ಬೇಡವೆಂದರೂ ತಾಯಿ ಪದಮ್ಮವ್ವಳ ಸಲಹೆಯಂತೆ ಕಾಡಿಬೇಡಿ ಬೆನ್ನಭುಜ ಪಡೆಯುವನು. ಅಮೋಘಸಿದ್ಧ ಕೊಡುವ ನಾಲ್ಕು ಮಂತ್ರದ ಹರಳನ್ನು ತಾಯಿಗೆ ಕೊಡುವನು. ಆಗ ನಾಲ್ಕು ಜನ ಮಕ್ಕಳಾಗುವರು. ಮುಂದೆ ಅವರು ದೊಡ್ಡವರಾದಾಗ ಅರಕೇರಿ ಅರಮನೆಯಿಂದ ಮುಮೆಟ್ಟ ಗುಡ್ಡದಲ್ಲಿ ನೆಲೆಸಿರುವ ತಂದೆ ನಾಡಗೌಡ ಅಮೋಘಸಿದ್ಧನ ಹತ್ತಿರ ಬಂದು ತಾವು ಲೋಕ ಸುತ್ತುವ ಕುರಿತು ಅಪ್ಪಣೆ ಕೇಳುವರು. ಆಗ ಗುರು ಸೋಮಲಿಂಗನ ದರ್ಶನ ಪಡೆದು ರಾಕ್ಷಿ ದಿಕ್ಕನ್ನು ಹೊರತುಪಡಿಸಿ ಇನ್ನೂಳಿದ ಕಡೆ ಲೋಕ ಸಂಚಾರಕ್ಕೆ ಹೋಗಲು ಆಶೀರ್ವದಿಸುವನು. ಉತ್ಸಾಹದ ಯುವಕರಾದ ಔದುಸಿದ್ಧ, ಬಿಳೇಣಿಸಿದ್ಧ ಗುರುವಿನ ದರ್ಶನ ಪಡೆದು, ತಂದೆ ಬೇಡವೆಂದ ರಾಕ್ಷಿ ದಿಕ್ಕಿನ ಕಡೆಗೆ ಲೋಕ ಸಂಚಾರಕ್ಕೆ ಹೋಗುವರು. ತೇಜ(ಕುದುರೆಯ)ನ್ನು ಬಿಜಾಪುರ ಆವರಿಸಿದ ಕೋಟೆಯನ್ನು ಜಿಗಿಸಿ ಕೀಲಿ ಹಾಕಿರುವ ಬಾಗಿಲವನ್ನು ಬಂಡಾರ ಹೊಡೆದು ಒಳಗೆ ಹೋಗುವರು. ಇವರ ಬರುವುವಿಕೆಯಿಂದ ಬರಡಾಗಿರುವ ಹೂವಿನ ತೋಟ ಚಿಗುರುವುದು. ಬತ್ತಿದ ತಾಸ ಭಾವಿಗೆ ನೀರು ಬರುವುದು. ಇದನ್ನು ಗಮನಿಸಿದ ಹೂಗಾರ ಮುದ್ದವ್ವ ಬಾದಶಾನಿಗೆ ತಿಳಿಸುವಳು. ಬಾದಶಾ ಇವರಿಗೆ ಕರೆಯಿಸಿ ಹಲವು ಸತ್ವ ಪರೀಕ್ಷೆ ಮಾಡುವನು. ಇವರು ಎಲ್ಲದರಲ್ಲೂ ಗೆಲ್ಲುವರು. ಕೊನೆಗೆ ಗೋಲಗುಮ್ಮಟ್ಟದ ಒಳಗೆ ಹೋಗಿ ಉಕ್ಕಿನ ಬೇಡಿಯಿಂದ ಬಿಡಿಸಿಕೊಂಡು ಬರುವ ಪರೀಕ್ಷೆ. ಇದಕ್ಕೆ ಬಿಳೇಣಿಸಿದ್ಧ ಅಸಮ್ಮತಿಸಿದರೆ ಔದುಸಿದ್ಧ ಒಪ್ಪಿ ಒಳಗೆ ಹೋಗುವAನು. ಹೋರ ಬರುವ ಸಂದರ್ಭದಲ್ಲಿ ಉಕ್ಕಿನ ಬೇಡಿಯಲ್ಲಿ ಸಿಕ್ಕು ಬೆಂಕಿಯ ಕಿಡಿಕಾರುವನು. ಅಂತಿಮವಾಗಿ ದೇವೇಂದ್ರ ಬಿಳೇಣಿಸಿದ್ಧ ತಂದೆ ಹಾಗೂ ಗುರುವಿನ ನೆನೆದು ಭಂಡಾರ ಹೊಡೆಯುವನು. ಉಕ್ಕಿನ ಬಲೆ ಒಡೆದು ಛಿದ್ರವಾಗಿ ಬೀಳುವುದು. ಇದರಿಂದ ಸೋತು ಶರಣಾದ ಬಾದಶಾ, 'ನೀವೇ ಇಂತಹ ಅವತಾರ ಪುರುಷರಾಗಿದ್ದೀರಿ ನಿಮ್ಮ ತಂದೆ ಎಂಥ ಅವತಾರ ಪುರುಷ ಇರಬಹುದು' ತೋರಿಸಿ ಎಂದು ಕೇಳಿಕೊಳ್ಳುವನು. ಅಲ್ಲಿಂದ

ಅರಕೇರಿವರೆಗೆ ಬಾದಶಾನನ್ನು ಕರೆದುಕೊಂಡು ಬರುವರು. ಅಲ್ಲಿ ಅವನನ್ನು ನಿಲ್ಲಿಸಿ ತಂದೆಯನ್ನು ನೋಡಿ ಬರುತ್ತೇವೆ ಎಂದು ಮುಮೆಟ್ಟ ಗುಡ್ಡಕ್ಕೆ ಬರುವರು. ಈ ವಿಷಯ ತಿಳಿದು ಅಮೋಘಸಿದ್ಧ ಬಾದಶಾನಿಗೆ ಭೇಟಿ ಮಾಡಲು ಮನಸ್ಸಿಲ್ಲದೆ ಮಾಸಿದ್ಧನಿಗೆ ನಿನ್ನ ತಮ್ಮಂದಿರು ಬಂದು ಕೇಳಿದರೆ ಇಲ್ಲವೆಂದು ಹೇಳು. ಹಾಗೊಂದು ವೇಳೆ ಪರಿಪರಿಯಾಗಿ ಕೇಳಿದರೆ ಸ್ವಲ್ಪ ಹೊತ್ತಿನಲ್ಲಿ ಬರುವೆನೆಂದು ಹೇಳು ಎಂದು ಮಾಯವಾಗುವನು. ಮುಮೆಟ್ಟಕ್ಕೆ ಬಂದ ಔದುಸಿದ್ಧ, ಬಿಳೇಣಿಸಿದ್ಧ ತಂದೆಗೆ ಹುಡುಕುವವರು. ಅವನು ಸಿಗದಿದ್ದಾಗ ಮಾಸಿದ್ಧನಿಗೆ ಕೇಳುವರು. ಅವನು ಗೊತ್ತಿಲ್ಲವೆಂದು ಹೇಳುವನು. ಕಾದು ಕಾದು ಮಾಸಿದ್ಧನಿಗೆ ಕಳ್ಳ ಮಾದ್ಯಾ ಸುಳ್ಳು ಮಾದ್ಯಾ ಎಂದು ಬೆನ್ನಿನ ಮೇಲೆ ಹೊಡೆಯುವರು. ಈ ಪೆಟ್ಟು ಮಾಸಿದ್ಧನಿಗೆ ಹತ್ತದೆ ಅಮೋಘಸಿದ್ಧನಿಗೆ ಹತ್ತುವುದು. ಅವರು ಹೋದ ನಂತರ ಅಮೋಘಸಿದ್ಧ ಪ್ರತ್ಯಕ್ಷವಾಗಿ ಮಾಸಿದ್ಧನಿಗೆ ತನ್ನ ಬೆನ್ನು ತೋರಿಸುವನು. 'ಬೆನ್ನುಭುಜ ಕೇಳಿದ್ದಿಯಲ್ಲ ನೋಡು ಎಂದು ತನ್ನ ಬಿರಿದ ಬೆನ್ನಿನ ಮೇಲೆ ಮೂಡಿದ ಬಾಸುಂಡಿಯನ್ನು ತೋರಿಸುವನು'. ಅವನು ಇದನ್ನು ನೋಡಿ ಭಯಭೀತನಾಗುವನು. ಆಗ ಅಮೋಘಸಿದ್ಧ ನಿಲ್ಲಬೇಡ ಅವರು ಮರಳಿ ಬರುವುದರಲ್ಲಿ ನೀನು ಅವಸರಸಿ ಅರಮನೆಯಿಂದ ನೇಮದ ಬೆತ್ತ, ಹೋಮದ ಕಂಬಳಿ, ಭಂಡಾರ ಭರಣಿ ತೆಗೆದುಕೊಂಡು ಗಂಗಿ ನಾಡಿಗೆ ಹೋಗು. ನಾನು ನಿನ್ನೊಂದಿಗೆ ಇರುವೆ ಎಂದು ಭಾಷೆ ಕೊಟ್ಟು ಆಶೀರ್ವದಿಸಿ ಕಳಿಸಿಕೊಡುವನು. ಅಲ್ಲಿಂದ ಮಾಸಿದ್ಧ ಅಮೋಘಸಿದ್ಧ ಹೇಳಿದ ಹಾಗೆ ಮಾಡುವನು.

ಅರಕೇರಿ ಅರಮನೆಗೆ ಬಂದ ಈ ಅಣ್ಣ ತಮ್ಮಂದಿರು ದೇವರ ಕೋಣೆಯಲ್ಲಿ ಕರಾಳ ಕತ್ತಲೆ ಬಿದ್ದಿರುವುದನ್ನು ನೋಡಿ ತಾಯಿ ಪದಮ್ಮವ್ವಳಲ್ಲಿ ವಿಚಾರಿಸುವರು. ಅವಳು ಅಮೋಘಸಿದ್ಧನ ಆಜ್ಞೆಯಂತೆ ಮಾಸಿದ್ಧನಿಗೆ ಹೋಮದ ಕಂಬಳಿ, ನೇಮದ ಬೆತ್ತ, ಭಂಡಾರ ಭರಣಿ ಕೊಟ್ಟಿರುವುದಾಗಿ ಹೇಳುವಳು. ಅವನು ತಂದೆಯ ಆಜ್ಞೆಯಂತೆ ಗಂಗಿ ದಿಕ್ಕಿಗೆ ಹೋಗಿದ್ದಾನೆಂದು ಹೇಳುವಳು. ಗಾಬರಿಸಿ, ಅವಸರಸಿ, ಸಿಟ್ಟಿನಿಂದ ಏಳು ಗೇಣಿನ ಕುದುರೆಯ ಮೇಲೆ ಕುಂತು ಗಾಳಿಯಂತೆ ಹೋಗುವರು. ಬೀಜಗುಂತಿಯ ಹತ್ತಿರ ಮಾಳಿಂಗರಾಯ ಕುರಿ ಕಾಯುತ್ತಿದ್ದುದ್ದನ್ನು ಗಮನಿಸಿ ಅವನಿಗೆ ಮಾಸಿದ್ಧನನ್ನು ನೋಡಿದ್ದಿಯಾ ಎಂದು ಕೇಳುವರು. ನೋಡಿರುವೆ, ಅವನು ಕುಂಟುತ್ತ ಇಲ್ಲೇ ಎಲ್ಲೋ ಹೊರಟಿಬೇಕು. ನೀವು ಅವನನ್ನು ಹಿಡಿಯುವುದು ತಡವಾಗಲಾರದು ಎಂದು ಹೇಳಿ ಅವರಿಗೆ ಊಟಕ್ಕೆ ಕರೆಯುವನು. ಇವರಿಗೆ ಮಾಸಿದ್ಧನ ಮೇಲೆ ವಿಪರೀತ ಸಿಟ್ಟು. ಅವನಿಂದ ಆ ವಸ್ತುಗಳನ್ನು ತೆಗೆದುಕೊಳ್ಳುವ ಆತುರದಲ್ಲಿ ಈ ಇಬ್ಬರು ಒಲ್ಲದ ಮನಸ್ಸಿಂದ ಊಟಕ್ಕೆ ಹೋಗುವರು. ಮಾಳಿಂಗರಾಯ ಮಾಸಿದ್ಧನ ಅಣತಿಯಂತೆ ಅವರಿಗೆ ಸಾಧ್ಯವಾದಷ್ಟು ತಡ ಮಾಡಿಸುವ ಪ್ರಯತ್ನ ಮಾಡುವನು. ಅದಕ್ಕಾಗಿ ಮಣ್ಣಿನ ಗಡಗಿಯಲ್ಲಿ ಹಸಿ ಉಸ್ಕು ಹಾಕಿ, ಹಸಿ ಕುಳ್ಳದಲ್ಲಿ ಅಡುಗೆ ಮಾಡಲು ಇಡುವನು. ಅದು ಸಾಕಷ್ಟು ತಡವಾಗುವುದು. ಇನ್ನೂ ಏಕೆ ಅಡುಗೆ ಆಗಿಲ್ಲವೆಂದು ಅನುಮಾನಿಸಿದ್ದ ಔದುಸಿದ್ಧ ಒಂದು ಬಾರಿ ಪರಿಶೀಲಿಸುವನು. ತಮ್ಮನ್ನು ಉದ್ದೇಶಪೂರ್ವಕವಾಗಿಯೇ ತಡಮಾಡಲೆಂದು ಹೀಗೆ

ಮಾಡಿರುವುದನ್ನು ಅರಿತ ಔದುಸಿದ್ಧ ಮಾಳಿಂಗರಾಯನಿಗೆ ನಿನ್ನ ಪೌಳಿಯಲ್ಲಿ ಎಲುಬು ತುಂಬಿರಲಿ ಎಂದು ಶಾಪ ನೀಡುವನು. ಅಲ್ಲಿಂದ ಮತ್ತೆ ಅವಸರಿಸಿ ಕುದುರೆ ಸವಾರಿ ಮಾಡುವರು. ಇವರು ಭೀಮಾ ನದಿ ಮುಟ್ಟುವುದರಲ್ಲಿ ಮಾಸಿದ್ಧ ಕಂಬಳಿ ಮೇಲೆ ಕುತ್ತು ನದಿ ದಾಟುತ್ತಿರುತ್ತಾನೆ. ಔದುಸಿದ್ಧ ಸಿಟ್ಟಿನ ಭರದಲ್ಲಿ ಕುದುರಿ ನದಿಯಲ್ಲಿ ಹಾರಿಸುವಷ್ಟರಲ್ಲಿ ಬಿಳೇಣಿಸಿದ್ಧ ತಡೆದು ನಿಲ್ಲಿಸಿ ತಾಯಿಯಿಂದ ತೆಗೆದುಕೊಂಡಿರುವ ಭಾಷೆಯನ್ನು ನೆನಪಿಸಿತ್ತಾನೆ. ಪದಮ್ಮವ್ವ ಮಕ್ಕಳಿಗೆ ಹೇಳಿದ್ದೇನೆಂದರೆ, ಮಾಸಿದ್ಧ ಭೀಮಾ ನದಿ ದಾಟಿದ್ದರೇ ನದಿ ದಾಟಿ ಅವನಿಂದ ಭಂಡಾರ ಭರಣಿ ಮತ್ತು ಹೋಮದ ಕಂಬಳಿ, ನೆಮದ ಬೆತ್ತ ತರಬೇಡಿ. ಹಾಗೇ ಮಾಡಿದರೆ ನನ್ನ ಮೇಲೆ ತೆಪ್ಪ ಬಿಟ್ಟಂತೆ ಆಗುತ್ತದೆಂದು ಹೇಳಿದ್ದಳು. ಅನಿವಾರ್ಯವಾಗಿ ಔದುಸಿದ್ಧ ನದಿಯಿಂದ ಹಿಂದೆ ಸರಿದು ದಡದ ಮೇಲೆ ನಿಂತು ಇಬ್ಬರು ಅಣ್ಣ-ತಮ್ಮಂದಿರು ಮಾಸಿದ್ಧನಿಗೆ ಕಳ್ಳ ಮಾದ್ಯಾ ಸುಳ್ಳ ಮಾದ್ಯಾ ಎಂದು ಬೈಯುವರು. ಅದಕ್ಕೆ ಪ್ರತಿಯಾಗಿ ಹಾಗೊಂದು ವೇಳೆ ನಾನು ಕಳ್ಳತನದಿಂದ ಹೋಮದ ಕಂಬಳಿ ನೆಮದ ಬೆತ್ತ, ಭಂಡಾರ ಭರಣಿ ತೆಗೆದುಕೊಂಡು ಬಂದಿದ್ದರೇ ಅವರ ಹತ್ತಿರ ಹೋಗಲಿ, ತಂದೆ ತಾಯಿ ಕೊಟ್ಟಿದ್ದಾಗಿದ್ದರೇ ನನ್ನ ತೊಡೆಯ ಮೇಲೆ ಬಂದು ಕೂಡ್ರಲಿ ಎನ್ನುವನು. ಅಷ್ಟರಲ್ಲಿ ಕಂಬಳಿ ರ್ರ್ ಅಂತ ಅವರ ಹತ್ತಿರ ಬಂದು ನೇರವಾಗಿ ಮಾಸಿದ್ಧನ ತೋಡೆ ಮೇಲೆ ಬಂದುಬಿಡುತ್ತದೆ. ಆದರೂ ಸಮಾಧಾನವಿಲ್ಲದ ತಮ್ಮಂದಿರು ಅಣ್ಣನಾದ ಮಾಸಿದ್ಧನಿಗೆ 'ನಿನ್ನ ಮಠದ ಪೌಳಿಯಲ್ಲಿ ಎಲುಬುಗಳೇ ತುಂಬಿರಲಿ' ಎಂದು ಶಾಪ ಕೊಡುವರು. ಅದಕ್ಕೆ ಪ್ರತಿಯಾಗಿ ಅಣ್ಣ ಮಾಸಿದ್ಧ ನೀವು ಅಂದಂತೆ ಆಗಲಿ. 'ನಿಮ್ಮ ಮಕ್ಕಳು ನನ್ನ ಮಠ ಮನೆಯಲ್ಲಿ ಹೊಟ್ಟೆ ತುಂಬಿಸಿಕೊಂಡು ಬದುಕಲಿ' ಎಂದು ಶಾಪ ಕೊಡುವನು.

ಈ ತರಹದ ಹಲವು ಪವಾಡ ಮತ್ತು ಸಂಘರ್ಷಗಳನ್ನು ಈ ಕಾವ್ಯದಲ್ಲಿ ಗಮನಿಸಬಹುದು. ಒಟ್ಟು ಕಥೆ ಈ ಕೃತಿಯಲ್ಲಿ ಬರದಿದ್ದರೂ ಅಮೋಘಸಿದ್ಧನ ದಾರ್ಶನಿಕತೆಯನ್ನು ಹಾಗೂ ಅವನ ನಂತರದ ತಲೆಮಾರಿನವರ ಸಿದ್ಧಾಟಿಕೆಯ ಹಲವು ಅಂಶಗಳನ್ನು ಈ ಸಂಪಾದಿತ ಕೃತಿಯಲ್ಲಿ ನೋಡಬಹುದು. ಮುಖ್ಯವಾಗಿ ಇದೊಂದು ಜನಪದ ಮಹಾಕಾವ್ಯ. ಸಹಜವಾಗಿ ಜನಪದ ಕವಿಯ ಪ್ರಾದೇಶಿಕ ಭಾಷೆ, ಹಾಡಿನ ಶೈಲಿ, ಲಯಗಾರಿಕೆ, ಇಂತಹ ಹಲವು ಅಂಶಗಳನ್ನು ಗಮನಿಸಬಹುದು. ಸಾವಿರಾರು ವರ್ಷಗಳಿಂದ ಸಾಗಿಬಂದ ಈ ಪರಂಪರೆ ಇವತ್ತಿಗೂ ಕರ್ನಾಟಕ ಹಾಗೂ ಮಹಾರಾಷ್ಟ್ರದ ಜನಮಾನಸದಲ್ಲಿ ಜೀವಂತವಾಗಿರುವುದನ್ನು ಕಾಣಬಹುದು.

ಆಧಾರ ಗ್ರಂಥಗಳು

೧. ಡಾ.ಚನ್ನಪ್ಪ ಕಟ್ಟಿ.(ಸಂ)-ಅಮೋಘಸಿದ್ಧ ಜನಪದ ಮಹಾಕಾವ್ಯ- ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೧೦